

# ರಾಜ್‌ಕುಮಾರ್ ಮತ್ತು ರಾಗಿ ರೊಟ್ಟಿ



‘ಬಹದ್ದೂರ್ ಗಂಡು’ ಸಿನಿಮಾ ನೋಡಿದ ಅಮ್ಮ, ರಾಗಿ ರೊಟ್ಟಿ ಬೇಡವೆಂದ ಮಗನ ಕೆನ್ನೆಗೆ ಹೊಡೆಯಬೇಕೆ? ಆ ಸಿಟ್ಟಿಗೆ ಕಾರಣವಾದರೂ ಏನು?

■ ಮಲ್ಲಿಕಾರ್ಜುನ ಹೊಸಪಾಳ್ಯ

ನಾನಾಗ ಮಿಡ್ಲಿಸ್ಕೂಲು ಓದುತ್ತಿದ್ದೆ. ನಮ್ಮ ಮನೆಯಲ್ಲಿ ಬೆಳಿಗ್ಗೆ ನಾಷ್ಟಕ್ಕೆ ರಾಗಿ ರೊಟ್ಟಿ ಮಾಡುತ್ತಿದ್ದುದು ವಾಡಿಕೆ. ಆವಾಗ ತಿಂಡಿ ಎಂಬ ಪದಕ್ಕೆ ರೊಟ್ಟಿ ಎಂಬ ಪದವು ಪರ್ಯಾಯವೇ ಆಗಿ ಹೋಗಿತ್ತು. ನನಗೋ ರಾಗಿ ರೊಟ್ಟಿ ಅಂದರೆ ಆಗುತ್ತಿರಲಿಲ್ಲ. ಚಟ್ನಿ ಇದ್ದರೆ ನೆಂಚಿಕೊಂಡು ಹಂಗೊ ಹಿಂಗೋ ಅರ್ಧ ರೊಟ್ಟಿ ತಿನ್ನುತ್ತಿದ್ದೆ. ಅಮ್ಮನಿಗೆ ಸಮಯ ಇದ್ದರೆ ಕಡ್ಲೆಬೀಜದ್ದೋ ಅಥವಾ ತೆಂಗಿನಕಾಯಿದೋ ಚಟ್ನಿ ಮಾಡುತ್ತಿತ್ತು, ಇಲ್ಲವಾದರೆ ಎಳ್ಳಿಕಾಯಿ ಉಪ್ಪಿನಕಾಯಿಯೇ ಗತಿ. ಕಂಚಿನ ಗಂಗಳದಲ್ಲಿ ಹಾಕಿದ ಆ ರೊಟ್ಟಿಯನ್ನೂ ಅದರ ಮೇಲೆ ಕುಳಿತ ಕೆಂಪನೆ ಉಪ್ಪಿನಕಾಯಿ ಹೋಳುಗಳನ್ನೂ ನೋಡಿದ ಕೂಡಲೇ ಸಿಟ್ಟು ನೆತ್ತಿಗೇರುತ್ತಿತ್ತು.

‘ಹೋಗಮ್ಮೋ ಯಾವನ್ ತಿಂತಾನೆ ಈ ರೊಟ್ಟಿ. ದಿನಾ ದಿನಾ ಇದುನ್ನೇ ಮಾಡ್ತೀಯಾ’ ಅಂತ ತಟ್ಟೆ ನೂಕುತ್ತಿದ್ದೆ. ಅಮ್ಮ ಸಮಾಧಾನ ಮಾಡುತ್ತಿತ್ತು. ‘ವತ್ತಿಲಿಕೆ ಬ್ಯಾರೆ ಏನಾರ ಮಾಡ್ಕೊಡ್ತೀನಿ, ಇವಾಗ ತಿನ್ನು’ ಎನ್ನುತ್ತಾ ಬೆಣ್ಣೆಯನ್ನೋ ತುಪ್ಪವನ್ನೋ ಹಾಕುತ್ತಿತ್ತು.

ಆದರೆ ಒಂದು ದಿನ ಇದ್ದಕ್ಕಿದಂತೆ ಅಮ್ಮನ ವರಸೆ ಬದಲಾಗಿ ಹೋಯಿತು. ರೊಟ್ಟಿ ಬೇಡ ಅಂದರೆ ಸಮಾಧಾನ ಮಾಡುವ ಬದಲು ಕುಂಡಿಯ ಮೇಲೆ ನಾಲ್ಕು ಏಟು ಕೊಡುವ ಮಟ್ಟಕ್ಕೆ ಬದಲಾಯಿತು. ಅದಕ್ಕೆ ಕಾರಣ ರಾಜ್‌ಕುಮಾರ್ ಅವರ ಒಂದು ಸಿನಿಮಾ.

ಅದು ‘ಬಹದ್ದೂರ್ ಗಂಡು’ ಸಿನಿಮಾ ರಿಲೀಸ್ ಆಗಿದ್ದ ಸಮಯ. ಎತ್ತಿನ ಗಾಡಿ ಕಟ್ಟಿಕೊಂಡು ನಮ್ಮೂರಿನಿಂದ ಬಸವನಹಳ್ಳಿ ಮೇಲಾಸಿ ದೂರದ ಹೊಸಕೆರೆಯ ಶಂಕರ್ ಟಾಕೀಸಿನಲ್ಲಿ ಈ ಸಿನಿಮಾ ನೋಡಿಕೊಂಡು ಬಂದಿದ್ದೆವು. ಬಂದಿದ್ದೇ ತಡ ಅಮ್ಮನಂತೂ ರಾಜ್‌ಕುಮಾರ್ ಮೈಮೇಲೆ ಬಂದಂತೆ ಆಡುತ್ತಿತ್ತು. ತಗಾ ಅಂದ್ರೆ ಸಿನಿಮಾದ್ದೇ ಮಾತು. ಸಿನಿಮಾ ನೋಡಿಕೊಂಡು ಬಂದ ನಂತರ ಒಂದು ದಿನ ಬೆಳಿಗ್ಗೆ ಮಾಮೂಲಿನಂತೆ ರಾಗಿ ರೊಟ್ಟಿಯಿಂದ ಅಲಂಕೃತವಾದ ಕಂಚಿನ ಗಂಗಾಳವು ಎಳ್ಳಿಕಾಯಿ ಉಪ್ಪಿನಕಾಯಿಯ ಟಾಪಿಂಗ್‌ನೊಂದಿಗೆ ನನ್ನ ಮುಂದೆ ಬಂದಿತು. ನಾನೂ ಮಾಮೂಲಿನಂತೆ ‘ಹೋಗಮ್ಮೋ’ ಅಂತ ತಟ್ಟೆಯನ್ನು ಸ್ವಲ್ಪ ಜೋರಾಗೇ ನೂಕಿದೆ. ಹಾಗೆ ಮಾಡಿದ್ದೇ ತಡ ಛಟೀರ್ ಅಂತ ಬಿತ್ತು ಕೆನ್ನೆಗೆ ಏಟು. ತತ್ತರಿಸಿಹೋದೆ. ರೊಟ್ಟಿ ತಟ್ಟುತ್ತಿದ್ದ ಕೈನಲ್ಲೇ ಹೊಡೆದಿದ್ದರಿಂದ ಹಸಿಟ್ಟೆಲ್ಲಾ ಕೆನ್ನೆಗೆ ಅಂಟಿಕೊಂಡಿತು. ‘ಅಂಥಾ ರಾಜ್‌ಕುಮಾರನೇ ರಾಗಿ ರೊಟ್ಟಿ ತಿಮ್ತರೆ. ಆ ಮಾರಾಜ್ರೂ ರಾಗಿರೊಟ್ಟಿನ ಕಣ್ಗೊತ್ಗಂಡು ತಿಮ್ತರೆ, ಅಂತಾದ್ರಾಗೆ ನಿಂದೇನ್ ದೌಲು’ ಅನ್ನುವ ಮಾತಿನ ಬಾಣಗಳೂ ಬಂದವು.

ಇದೆಲ್ಲಾ ಬಹದ್ದೂರ್ ಗಂಡಿನ ಪ್ರಭಾವ ಅಂತ ನನಗೆ ಗೊತ್ತಾಗೋಯ್ತು. ಸಿನಿಮಾ ನೋಡಿದವರಿಗೆ ಈ ರೊಟ್ಟಿ ದೃಶ್ಯ ನೆನಪಿರಬಹುದು. ಅದರಲ್ಲಿ ಒಮ್ಮೆ ಬಂಕಾಪುರಕ್ಕೆ ಬಂದ ಮಹಾರಾಜರು (ಉದಯಕುಮಾರ್) ರಾಜ್‌ಕುಮಾರ್ ತಿನ್ನುವ ರೊಟ್ಟಿಯನ್ನು ಇಷ್ಟಪಡುತ್ತಾರೆ. ಇದರಿಂದ ಖುಷಿಯಾದ ರಾಜ್‌ಕುಮಾರ್ ಅವರ ಅಮ್ಮನಿಂದ ರೊಟ್ಟಿ ಮಾಡಿಸಿಕೊಂಡು ಆ ಗಂಟಿನೊಂದಿಗೆ ಅರಮನೆಗೆ ಹೋಗುತ್ತಾರೆ. ಅಲ್ಲಿ ಎದುರಾದ ಮಹಾರಾಜರ ಮಗ ವಜ್ರಮುನಿ ಆ ರೊಟ್ಟಿ ಗಂಟನ್ನು ಕಿತ್ತುಕೊಂಡು ಕಾಲಲ್ಲಿ ನೂಕಿಬಿಡುತ್ತಾರೆ. ಅಲ್ಲಿಗೆ ಬಂದ ಮಹಾರಾಜರು ರೊಟ್ಟಿ ಗಂಟನ್ನು ಎತ್ತಿಕೊಂಡು ಕಣ್ಣಿಗೆ ಒತ್ತಿಕೊಂಡು ತಿನ್ನುತ್ತಾರೆ.

ಈ ದೃಶ್ಯಕ್ಕೆ ನನ್ನ ಅಮ್ಮ ವಿಪರೀತ ಕನೆಕ್ಟ್ ಆಗಿಬಿಟ್ಟಿತ್ತು. ಅದಕ್ಕಾಗೇ ರೊಟ್ಟಿಯನ್ನು ತಳ್ಳಿದ ನನಗೆ ಗೂಸ ಬಿದ್ದವು. ನಾನು ಕಣ್ಣು ತುಂಬಾ ನೀರು ತುಂಬಿಕೊಂಡು ಜೋರಾಗಿ ಅಳುತ್ತಾ ಎದ್ದುಹೋದೆ. ಆವತ್ತೆಲ್ಲಾ ಊಟವನ್ನೇ ಮಾಡಿರಲಿಲ್ಲ. ತುಂಬಾ ದಿನ ಅಮ್ಮನೊಟ್ಟಿಗೂ ಮಾತು ಬಿಟ್ಟಿದ್ದೆ. ಆದರೆ ಅಮ್ಮ ಇದಕ್ಕೆಲ್ಲಾ ಕೇರೇ ಮಾಡಲಿಲ್ಲ. ಅವಳಿಗೆ ನನಗಿಂತ ರೊಟ್ಟಿ ತಿಂದ ರಾಜಕುಮಾರನೇ ಹೆಚ್ಚಾಗಿಬಿಟ್ಟಿದ್ದರು. ಆವತ್ತಿನಿಂದ ಯಾರಾದರೂ ರೊಟ್ಟಿ ಕುರಿತು ಕೇವಲವಾಗಿ ಮಾತಾಡಿದರೆ ಅಮ್ಮ ಈ ಉದಾಹರಣೆಯನ್ನೇ ಕೊಟ್ಟು ಬಾಯಿ ಮುಚ್ಚಿಸುತ್ತಿತ್ತು.

ಎಲ್ಲಾ ಬಿಟ್ಟು ರಾಗಿ ರೊಟ್ಟಿ ತಿಂದ ರಾಜ್‌ಕುಮಾರ್ ಹಾಗೂ ಆ ರಾಜನ ಮೇಲೆ ನನಗೆ ಎಲ್ಲಿಲ್ಲದ ಸಿಟ್ಟು ಬಂದಿತ್ತು. ‘ದೋಸೇನೋ ಇಡ್ಲೀನೋ ತಿನ್ನೋಕೇನಾಗಿತ್ತು’ ಅವರಿಗೆ ಅಂತ ಮನಸ್ಸಿನಲ್ಲಿ ಎಷ್ಟೋ ಸಾರಿ ಅಂದುಕೊಂಡೆ. ಅದಾದ ಎಷ್ಟೋ ವರ್ಷಗಳವರೆಗೂ ಅದು ನನ್ನ ಹುಡುಗು ಮನಸ್ಸಿನಲ್ಲಿ ನಿಂತುಬಿಟ್ಟಿತ್ತು. ಹೀಗಾಗಿ ಅವರ ಸಿನಿಮಾಗಳನ್ನೂ ಇಷ್ಟಪಟ್ಟು ನೋಡುತ್ತಿರಲಿಲ್ಲ. ಆದರೆ ಈ ಮುನಿಸು ತುಂಬಾ ವರ್ಷ ಉಳಿಯಲಿಲ್ಲ. ರಾಜ್‌ಕುಮಾರ್ ಸಿನಿಮಾಗಳ ಸೆಳೆತವೇ ನನ್ನ ಸಿಟ್ಟಿಗಿಂತ ಬಲವಾಗಿತ್ತು ಅನ್ನಿ.

ಮೊನ್ನೆ ಊರಿಗೆ ಹೋದಾಗ ರಾಗಿ ರೊಟ್ಟಿ–ಕಡ್ಲೆ ಕಾಯ್ ಚಟ್ನಿ ಬೇಕೆಂದು ಕೇಳಿದೆ. ಆಗ ಅಮ್ಮ ಹಳೆಯದನ್ನೆಲ್ಲಾ ನೆನಪಿಸಿಕೊಂಡು, ‘ನೋಡಿದಾ, ನೀನು ಆಂಬೊಡೆ ಹಾಲ್ ಕೀರ್ ಕುಡುದ್ರೂ ತಿರಗಾ ರಾಗಿ ರೊಟ್ಟಿನೇ ಗಟ್ಟಿ’ ಎಂದು ಬಾಯ್ತುಂಬಾ ನಕ್ಕಿತು. ■